ಅವಶ್ಯಕವಾದ ಮಾಲನ್ನು ನಿಖರವಾದ ತೂಕದ ವ್ಯವಸ್ಥೆಗೆ ಒಳಪಡಿಸುವುದು ತೂಕದವರ ಹೊಣೆಯಾಗುತ್ತದೆ. ನಿರ್ದಿಷ್ಟವಾದ ಪ್ರಕರಣಗಳಲ್ಲಿ ತೂಕದಲ್ಲಿ ಮೋಸ ನಡೆದಿರುವುದನ್ನು ರೈತರು ನೇರವಾಗಿ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರಿಗೆ ದೂರು ಕೊಡಲು ಅವಕಾಶವಿದೆ.

ಇಂತಹ ಖರೀದಿಗೆ ಮಾರುಕಟ್ಟೆ ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ.

ಕೃಷಿ ಉತ್ಪನ್ನಗಳನ್ನು ವ್ಯಾಪಾರಸ್ಥರು ಹಳ್ಳಿಗಳಲ್ಲಿ ಖರೀದಿಸುವುದನ್ನು ಮಾರುಕಟ್ಟೆ ಕಾಯ್ದೆಯಲ್ಲಿ ನಿಷೇಧಿಸಲಾಗಿದೆ. ಸಹಕಾರಿ ಸಂಘಗಳನ್ನು ಹೊರತುಪಡಿಸಿ ಹಳ್ಳಿಗಳಲ್ಲಿ ಹುಟ್ಟುವಳಿಗಳನ್ನು ಖರೀದಿಸುವ ವ್ಯಾಪಾರಸ್ಥರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಹಾಗೂ ರೈತರಿಗೆ ಹಣ ಪಾವತಿ ವಿಳಂಬ ಮಾಡುವ ವರ್ತಕರ ಲೈಸೆನ್ಸ್‌ಗಳನ್ನು ಅಮಾನತ್ತು ಅಥವಾ ರದ್ದುಪಡಿಸುವಂತಹ ಕ್ರಮಗಳನ್ನು ಮಾರುಕಟ್ಟೆ ಸಮಿತಿಗಳು ಕೈಗೊಳ್ಳುತ್ತವೆ.

ಇಂತಹ ಪ್ರಸಂಗಗಳಲ್ಲಿ ಮಾರುಕಟ್ಟೆ ಸಮಿತಿಯಿಂದ ಹಣ ಪಾವತಿ ಮಾಡಲು ಮಾರುಕಟ್ಟೆ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ.

ವಿಷಯ:- ಕಲಘಟಗಿ ತಾಲ್ಲೂಕಿಗೆ ಪ್ರತ್ಯೇಕ ಎ.ಪಿ.ಎಂ.ಸಿ.ಮಾರುಕಟ್ಟೆ ಸಮಿತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೯೬:- (೨೯೪)

ಶ್ರೀ. ಪಿ.ಸಿ. ಸಿದ್ದನ್ನಗೌಡರ್ (ಕಲಘಟಗಿ)

ಮಾನ್ಯ ವ್ಯವಸಾಯೋತ್ಪನ್ನಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಲಘಟಗಿ ತಾಲ್ಲೂಕಿಗೆ ಪ್ರತ್ಯೇಕ ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿ ಮಾಡುವ ನಿರ್ಣಯ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಅದನ್ನು ಮಾಡದಿರುವುದಕ್ಕೆ ಕಾರಣವೇನು?

ಇ) ಹುಬ್ಬಳ್ಳಿ ಎ.ಪಿ.ಎಂ.ಸಿ.ಯಿಂದ ಕಲಘಟಗಿ ಮಾರ್ಕೆಟ್ ಯಾರ್ಡ್‌ನ್ನು ಶಿಗ್ಗಾಂವ್‌ಗೆ ಬದಲಾಯಿಸಲು ಕಾರಣವೇನು?

ಈ) ಪ್ರತ್ಯೇಕ ಮಾರುಕಟ್ಟೆ ಮಾಡುವಾಗ ಸರ್ಕಾರದವರು ಅನುಸರಿಸಿದ ನಿಯಮಗಳೇನು?

ಉ) ಕಲಘಟಗಿ ಸಬ್ ಮಾರ್ಕೆಟ್ ಯಾರ್ಡ್‌ನಿಂದ ಸಾಕಷ್ಟು ಆದಾಯವಿದ್ದರೂ ಕೂಡ ಇದನ್ನು ಪ್ರತ್ಯೇಕ ಮಾರುಕಟ್ಟೆ ಸಮಿತಿಯನ್ನಾಗಿ ಮಾಡದಿರಲು ಕಾರಣವೇನು?

ಶ್ರೀ ಮದನ ಗೋಪಾಲ ನಾಯಕ್
(ಮಾರುಕಟ್ಟೆ ರಾಜ್ಯ ಸಚಿವರು)

ಇಂತಹ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ
ಉದ್ಭವಿಸುವುದಿಲ್ಲ

ಹುಬ್ಬಳ್ಳಿ ಮಾರುಕಟ್ಟೆ ಸಮಿತಿ ಕ್ಷೇತ್ರವು ವಿಭಜನೆಪೂರ್ವದಲ್ಲಿ ಹುಬ್ಬಳ್ಳಿ, ಶಿಗ್ಗಾಂವ ಮತ್ತು ಕಲಘಟಗಿ ತಾಲ್ಲೂಕುಗಳು ಮತ್ತು ಸವಣೂರು ತಾಲ್ಲೂಕಿನ ೧೨ ಹಳ್ಳಿಗಳನ್ನು ಒಳಗೊಂಡಿತ್ತು. ಈ ವಿಸ್ತಾರವಾದ ಕ್ಷೇತ್ರದಲ್ಲಿ ಮಾರಾಟ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವುದು ಕಷ್ಟಸಾಧ್ಯವಾದುದರಿಂದ ಭೌಗೋಳಿಕವಾಗಿ ಹೊಂದಿಕೊಂಡಿರುವ ಶಿಗ್ಗಾಂವಿ ಮತ್ತು ಕಲಘಟಗಿ ತಾಲ್ಲೂಕುಗಳನ್ನು ಸೇರಿಸಿ ಉತ್ತಮ ಸಾರಿಗೆ ಸೌಲಭ್ಯ ವಿರುವ ಶಿಗ್ಗಾಂವಿಯಲ್ಲಿ ಪ್ರತ್ಯೇಕ ಮಾರುಕಟ್ಟೆ ಸಮಿತಿಯನ್ನು ರೈತರ ಹಿತದೃಷ್ಟಿಯಿಂದ ಸ್ಥಾಪಿಸಲಾಗಿದೆ.

ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ ೧೯೬೬ ರ ಪ್ರಕರಣ ೩,೪.೧೦ ಮತ್ತು ೧೪೫ ರಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಪಾಲಿಸಿದೆ.

ಕಲಘಟಗಿ ಒಂದೇ ತಾಲ್ಲೂಕಿನಿಂದ ಒರುವ ಆದಾಯ ಮತ್ತು ಆರ್ಥಿಕ ಸಂಪನ್ಮೂಲದಿಂದ ಸ್ವತಂತ್ರ ಮಾರುಕಟ್ಟೆಯನ್ನು ಸ್ಥಾಪಿಸಲು ಸಾಧ್ಯವಿರಲಿಲ್ಲವಾದ ಕಾರಣ, ಕಲಘಟಗಿ ಮತ್ತು ಶಿಗ್ಗಂವ ತಾಲ್ಲೂಕುಗಳನ್ನು ಒಂದುಗೂಡಿಸಿ, ಶಿಗ್ಗಾಂವದಲ್ಲಿ ಮಾರುಕಟ್ಟೆ ಸಮಿತಿ ಸ್ಥಾಪಿಸಲಾಗಿದೆ.

ವಿಷಯ:- ರಾಜ್ಯದ ವ್ಯವಸಾಯಸೇವಾ ಸಹಕಾರಿ ಸಂಘಗಳ ಸಿಬ್ಬಂದಿ ಮತ್ತು ವೇತನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೯೭:- (೨೯೬)
ಶ್ರೀ ಪಿ.ಸಿ. ಸಿದ್ದನಗೌಡರ್. (ಕಲಘಟಗಿ)
ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಇರುವ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿರುವ ಕಾರ್ಯದರ್ಶಿ ಮತ್ತು ಗುಮಾಸ್ತರುಗಳ ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು?
ಆ) ಸಹಕಾರಿ ಸಂಘಗಳ ನೌಕರರುಗಳನ್ನು ಸರ್ಕಾರಿ ನೌಕರರುಗಳೆಂದು ಪರಿಗಣಿಸಲಾಗುವುದೆ?
ಇ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು?
ಈ) ಈ ಹಿಂದೆ ಸಹಕಾರಿ ಸಂಘಗಳ ಕಾರ್ಯದರ್ಶಿಯವರು ಮುಷ್ಕರ ಹೂಡಿದಾಗ ಅವರಿಗೆ ಸರ್ಕಾರದವರು ನೀಡಿದ ಭರವಸೆ ಏನು?
ಉ) ಸಹಕಾರಿ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ವೇತನಕ್ಕೂ ಮತ್ತು ಸರ್ಕಾರಿ ನೌಕರರ ವೇತನಕ್ಕೂ ವ್ಯತ್ಯಾಸ ಇರುವುದು ಸರ್ಕಾರಕ್ಕೆ ತಿಳಿದಿದೆಯೇ?
ಊ) ತಿಳಿದಿದ್ದಲ್ಲಿ ಸರ್ಕಾರ ಇವರ ಪಗಾರ ಹೆಚ್ಚಿಸಲು ತೆಗೆದು ಕೊಂಡ ಕ್ರಮವೇನು?

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆ
(ಸಹಕಾರ ಸಚಿವರು)

ರಾಜ್ಯದಾದ್ಯಂತ ಇರುವ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಒಟ್ಟು ೧೮,೦೫೦ ಸಿಬ್ಬಂದಿ ಇದ್ದು ಅದರ ವಿವರ ಈ ಕೆಳಕಂಡಂತಿವೆ:-

೧) ಪೂರ್ಣಾವಧಿ ಕಾರ್ಯದರ್ಶಿಗಳು	೪,೫೭೭
೨) ಅರಕಾಲಿಕ ಕಾರ್ಯದರ್ಶಿಗಳು	೩೮೪
೩) ಇತರೇ ಸಿಬ್ಬಂದಿಗಳು	೧೩,೭೧೯
ಒಟ್ಟು	೧೮,೦೫೦

ಇಲ್ಲ.

ರಾಜ್ಯ ಸರ್ಕಾರವು ತನ್ನ ನೌಕರರಿಗೆ ನೀಡಲಾಗುವ ವೇತನ, ಭತ್ಯೆ ಮೊದಲಾದವುಗಳನ್ನು ತನ್ನ ಸಂಚಿತ ನಿಧಿಯಿಂದ ಭರಿಸುತ್ತದೆ. ಆದರೆ ಸಹಕಾರ ಸಂಘ:ಸಂಸ್ಥೆಗಳು ಸ್ವಯಂ ಆಡಳಿತಾತ್ಮಕ ಸಂಸ್ಥೆಗಳಾಗಿರುತ್ತದೆ. ಮತ್ತು ಈ ಸಂಸ್ಥೆಗಳು ತಮ್ಮ ವ್ಯಾಪಾರ ವ್ಯ.ವಹಾರಗಳಿಂದ ಬರುವ ಗಳಿಕೆಯಲ್ಲಿ ಸಹಕಾರ ಸಂಘಗಳ ಕಾಯ್ದೆ ಕಾನೂನಿಗೊಳಪಟ್ಟು ತಮ್ಮ ಸಿಬ್ಬಂದಿಗಳ ವೇತನ, ಭತ್ಯೆ ಮೊದಲಾದವುಗಳನ್ನು ನಿರ್ವಹಿಸುತ್ತವೆ. ಇದರಿಂದಾಗಿ ಸಹಕಾರ ಸಂಘಗಳ ನೌಕರರುಗಳನ್ನು ಸರ್ಕಾರಿ ನೌಕರರುಗಳೆಂದು ಪರಿಗಣಿಸಲಾಗುವುದಿಲ್ಲ.

ದಿನಾಂಕ: ೦೨-೦೧-೧೯೯೦ ರಂದು ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳು ಮುಷ್ಕರ ಹೂಡಿದಾಗ ಅಂದಿನ ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ ೧೦-೦೨-೧೯೯೦ ರೊಳಗಾಗಿ ಒಕ್ಕೂಟದ ಪದಾಧಿಕಾರಿಗಳನ್ನು ಕರೆದು ಮಾತುಕತೆ ನಡೆಸುವುದಾಗಿ ಭರವಸೆ ನೀಡಿದ್ದರು.